**ಸಾಕ್ಷಿಗೆ ದಿನಾಂಕಃ 24.02.2026 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎಂ.ಡಿ. ವಕೀಲರಿಂದಃ**

1 ನೇ ವಾದಿ ನನಗೆ ತಾಯಿಯಾಗಬೇಕು. ನನಗೆ ಓದಲು ಬರೆಯಲು ಬರುವುದಿಲ್ಲ. ಸರ್ವೆ ನಂ.2019 ರ ಒಟ್ಟು ವಿಸ್ತೀರ್ಣ 1 ಎಕರೆ 33 ಗುಂಟೆ ಎಂದರೆ ಸರಿ. ಸದರಿ ಸ್ವತ್ತು ಪ್ರತಿವಾದಿ ಹಾಗೂ ಅವರ ಸಹೋದರ ಬಸವರಾಜು ಮತ್ತು ಮಾದೇಗೌಡರ ನಡುವೆ ವಿಭಾಗ ಆಗಿತ್ತು ಎಂದರೆ ಸರಿ. ಸದರಿ ವಿಭಾಗದಲ್ಲಿ ಪ್ರತಿವಾದಿಗೆ ಪೂರ್ವದ ಕಡೆ 33 ಗುಂಟೆ ಬಂದಿತ್ತು ಎಂದರೆ ಸರಿ. ಪ್ರತಿವಾದಿಯ ಜಮೀನಿನ ಪಕ್ಕದಲ್ಲಿ ಪಶ್ಚಿಮದ ಕಡೆ ಅವರ ಸಹೋದರ ಬಸವರಾಜು ರವರಿಗೆ 30 ಗುಂಟೆ ಬಂದಿತ್ತು ಎಂದರೆ ಸರಿ. 10 ಗುಂಟೆಯನ್ನು ಅವರ ತಂದೆ ಮಾದೇಗೌಡರಿಗೆ ಬಿಟ್ಟಿದ್ದರು ಎಂದರೆ ಸರಿ. ಅದರ ಪ್ರಕಾರ ಎಂ.ಆರ್.ಸಂ.207/1998-99 ರಂತೆ ಖಾತೆ ಆಗಿತ್ತಿ ಎಂದರೆ ಸರಿ.

ಪ್ರತಿವಾದಿಯ ಜಮೀನಿನ ಚೆಕ್ಕುಬಂದಿ ಪೂರ್ವಕ್ಕೆ ಚಿಕ್ಕಮುದ್ದೇಗೌಡರ ಜಮೀನು ಎಂದರೆ ಸರಿ. ಪಶ್ಚಿಮಕ್ಕೆ ಪ್ರತಿವಾದಿಯ ಸಹೋದರ ಬಸವರಾಜು ರವರಿಗೆ ಸೇರಿದ 30 ಗುಂಟೆ ಜಮೀನು ಎಂದರೆ ಸರಿ. ಉತ್ತರಕ್ಕೆ ರಸ್ತೆ ಎಂದರೆ ಸರಿ. ಪಶ್ಚಿಮಕ್ಕೆ ಪ್ರತಿವಾದಿಯ ಸಹೋದರ ಬಸವರಾಜು ರವರ 30 ಗುಂಟೆ ಜಮೀನಿನ ನಂತರ 10 ಗುಂಟೆ ಜಮೀನು ಮಾದೇಗೌಡರಿಗೆ ಸೇರಿರುತ್ತದೆ ಎಂದರೆ ಸರಿ. 1 ನೇ ವಾದಿಯ ತಾಯಿ ಮಾದಮ್ಮ ಸದರಿ ಮಾದೇಗೌಡರಿಗೆ ಸಹೋದರಿ ಎಂದರೆ ಸರಿ. ದಿ.06.03.1989 ರ ವಿಭಾಗದಂತೆ 1 ನೇ ವಾದಿಯ ತಾಯಿಗೆ 10 ಗುಂಟೆಯನ್ನು ಬಿಟ್ಟಿದ್ದರು ಎಂದರೆ ಸರಿ. ನಂತರ ಸದರಿ ಸ್ವತ್ತು 1 ನೇ ವಾದಿಗೆ ಬಂದಿರುತ್ತದೆ ಎಂದರೆ ಸರಿ.

ಅಸಲು ದಾವಾ ಸಂ.172/1999 ನ್ನು ಈ ದಾವೆಯ ಪ್ರತಿವಾದಿಯು ನನ್ನ ತಂದೆ ತಾಯಿ ಹಾಗೂ ನನ್ನ ವಿರುದ್ಧ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯನ್ನು 33 ಗುಂಟೆಗೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯು ಲೋಕ ಅದಾಲತ್ ನಲ್ಲಿ ರಾಜಿ ಆಗಿದ್ದು, 33 ಗುಂಟೆ ಈ ದಾವೆಯ ಪ್ರತಿವಾದಿಗೆ ತೊಂದರೆ ಕೊಡಬಾರದೆಂದು ಹಾಗೂ 10 ಗುಂಟೆ ನಮಗೆ ಸೇರಿದ್ದು ಎಂದು ರಾಜಿ ಆಗಿರುತ್ತದೆ ಎಂದರೆ ಸರಿ. 10 ಗುಂಟೆಯ ಚೆಕ್ಕುಬಂದಿ ಪೂರ್ವಕ್ಕೆ ಬಸವರಾಜು ರವರಿಗೆ ಸೇರಿದ 30 ಗುಂಟೆಯ ಜಮೀನು ಎಂದರೆ ಸರಿ. ಪಶ್ಚಿಮಕ್ಕೆ ಗಾಡಿ ಮುದ್ದನ

ಎಂ.ಕೆಂಪೇಗೌಡರ ಜಮೀನು ಎಂದರೆ ಸರಿ. ಉತ್ತರಕ್ಕೆ ದೇವರ ಆದಿ ರಸ್ತೆ ಎಂದರೆ ಸರಿ. ದಕ್ಷಿಣಕ್ಕೆ ನೀರು ಹಣ್ಣೆ ಮತ್ತು ಪುಟ್ಟೇಗೌಡ ನಿಂಗೇಗೌಡರ ಜಮೀನು ಎಂದರೆ ಸರಿ. ನಮ್ಮ ಮತ್ತು ಪ್ರತಿವಾದಿಯ ಜಮೀನಿನ ಮಧ್ಯೆ ಪ್ರತಿವಾದಿಯ ಸಹೋದರ ಬಸವರಾಜು ರವರ ಜಮೀನು ಬರುತ್ತದೆ ಎಂದರೆ ಸರಿ. ನನ್ನ ಮತ್ತು ಪ್ರತಿವಾದಿಯ ಜಮೀನಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ಅನುಭವದಂತೆ ಎಂ.ಆರ್.242/1999-2000 ರಂತೆ 1 ನೇ ವಾದಿಯ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿಯು ಅನುಭವ ಕಾಲಂ ನಲ್ಲಿ ತೋರಿಸಿದ್ದು, ಖಾತೆ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾಖಲೆಯ ಬಗ್ಗೆ ದಾವಾ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಸದರಿ ಸ್ವತ್ತು ದಾವಾ ಸ್ವತ್ತು ಆಗಿರುತ್ತದೆ ಎಂದರೆ ಸರಿ.

ಪ್ರತಿವಾದಿ ಮತ್ತು ಅವರ ಸಹೋದರರು ಪ್ರತ್ಯೇಕವಾಗಿ ವಾಸವಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವಕ್ಕೆ ಬಸವರಾಜು ರವರ ಜಮೀನು ಬರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಚೆಕ್ಕುಬಂದಿಯಲ್ಲಿ ಪೂರ್ವಕ್ಕೆ ಬಸವರಾಜು ರವರ ಜಮೀನನ್ನು ತೋರಿಸಿರುವುದಿಲ್ಲ ಎಂದರೆ ಸರಿ. ನಿ.ಪಿ.1 ರಲ್ಲಿ 10 ಗುಂಟೆಯನ್ನು ನಮ್ಮ ತಾಯಿಗೆ ಬಿಟ್ಟುಕೊಡಲಾಗಿದೆ ಎಂದು ನಮೂದು ಇರುತ್ತದೆ ಎಂದರೆ ಸರಿ. ದಿ.06.03.1989 ರ ವಿಭಾಗದಂತೆ ದಾವಾ ಸ್ವತ್ತನ್ನು ನಾನು ಮತ್ತು ನಮ್ಮ ತಾಯಿ ಅನುಭವಿಸುತ್ತಿದ್ದೇವೆ ಎಂದರೆ ಸರಿ. ಪ್ರತಿವಾದಿಯು ನನ್ನ ಜಮೀನಿಗೆ ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ತೊಂದರೆ ನೀಡಿದ ಬಗ್ಗೆ ದೂರು ನೀಡಿರುತ್ತೇನೆ. ದೂರನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿ ಹಾಗೂ ಅವರ ಕುಟುಂಬದವರು ನಮಗೆ ತೊಂದರೆ ನೀಡದೆ ಇದ್ದರೂ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ನಾವೇ ತೊಂದರೆ ನೀಡುತ್ತಿದ್ದು ಈ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**